**ಸಾಕ್ಷಿಯನ್ನು ದಿನಾಂಕ 10.11.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಪ್ರತಿವಾದಿಯ 1/3 ಹಿಸ್ಸೆಗೆ ಉಪ ನೋಂದಣಿ ಕಛೇರಿಯಲ್ಲಿ ಕರಾರು ಪತ್ರ ಮಾಡಬಹುದು ಅಂದರೆ ಸರಿಯಲ್ಲ. ನಾನು ಹೇಳುವ ಕ್ರಯದ ಕರಾರಿನ ಹಣ ರೂ.500/- ಮುಖಬೆಲೆಯ ನೋಟುಗಳಾಗಿದ್ದವು. ರೂ.34 ಲಕ್ಷದಲ್ಲಿ ಸ್ವಲ್ಪ ಹಣವನ್ನು ಎ.ಟಿ.ಎಂ.ನಿಂದ ಡ್ರಾ ಮಾಡಿರುತ್ತೇನೆ, ಸ್ವಲ್ಪ ಹಣ ವ್ಯಾಪಾರದಿಂದ ಮತ್ತು ನನ್ನ ಬಳಿ ಇದ್ದ ಉಳಿತಾಯದಿಂದ ನೀಡಿರುತ್ತೇನೆ. ಎ.ಟಿ.ಎಂ. ಮೂಲಕ ದಿನಕ್ಕೆ ರೂ.20 ಸಾವಿರ ಮಾತ್ರ ಡ್ರಾ ಮಾಡಬಹುದು ಅಂದರೆ ಸರಿಯಲ್ಲ. ಆದಾಯ ತೆರಿಗೆಗೆ ತೊಂದರೆಯಾಗುತ್ತದೆ ಎಂದು ಮತ್ತು ತಮಗೆ ನಗದೇ ಬೇಕು ಎಂದು ಪ್ರತಿವಾದಿ ಹೇಳಿದ್ದರಿಂದ ನಾನು ಹಣವನ್ನು ಆರ್.ಟಿ.ಜಿ.ಎಸ್. ಅಥವಾ ಚೆಕ್ ಮೂಲಕ ನೀಡಿರುವುದಿಲ್ಲ.

ನಿ.ಪಿ.1 ರಲ್ಲಿನ ಜಮೀನಿನ ಚೆಕ್ ಬಂಧಿಯನ್ನು ನಾನು ಮತ್ತು ಪ್ರತಿವಾದಿಯರು ಸೇರಿ ಕೇಳಿ ಬರೆಸಿರುತ್ತೇವೆ. ದಾವಾ ಆಸ್ತಿ ಸಾಮೊಹಿಕದಲ್ಲಿರುವುದರಿಂದ ಯಾರಿಗೆ ಯಾವ ಭಾಗದಲ್ಲಿ ಹಿಸ್ಸೆ ಬರುತ್ತದೆ ಎಂದು ಹೇಳಲು ಆಗುವುದಿಲ್ಲ ಅಂದರೆ ಪ್ರತಿವಾದಿಗೆ ಯಾವ ಭಾಗದಲ್ಲಿ ಹಿಸ್ಸೆ ಬರುತ್ತದೆ ಎಂದು ಅವರು ಮತ್ತು ಅವರ ಸಹೋದರ ನಿರ್ಧರಿಸಿ ದಾವಾ ಆಸ್ತಿಯನ್ನು ನನಗೆ ತೋರಿಸಿರುತ್ತಾರೆ. ನಿ.ಪಿ.1 ರಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ ಬಂಧಿಗೂ ದಾವಾ ಆಸ್ತಿಯ ವಸ್ತು ಸ್ಥಿತಿಗೂ ವ್ಯತ್ಯಾಸ ಇರುತ್ತದೆ ಅಂದರೆ ಸರಿಯಲ್ಲ.

ನಿ.ಪಿ.1 ರಲ್ಲಿ ವೈಟ್ನರ್ ಅನ್ನು ಬಳಸಿದ್ದು ಮಾರನೇ ದಿನ ಹೊಸ ಬಾಂಡ್ ಪೇಪರ್ ಅನ್ನು ಪಡೆದು ಕರಾರು ಪತ್ರ ಮಾಡಬಹುದಿತ್ತು ಎಂಬ ಸೂಚನೆಗೆ ಸಾಕ್ಷಿಯು ಸಮಯದ ಅಭಾವ ಇದ್ದುದ್ದರಿಂದ ಹೊಸ ಬಾಂಡ್ ಪೇಪರಿನಲ್ಲಿ ಕರಾರು ಪತ್ರ ಮಾಡಿರುವುದಿಲ್ಲ ಎನ್ನುತ್ತಾರೆ. ಮೊದಲೇ ತರಿಸಿಟ್ಟಿದ್ದ ಬಾಂಡ್ ಪೇಪರಿನಲ್ಲಿ ಪೇಜ್ ಅಡ್ಜಸ್ಟ್ ಮಾಡಿ ನಿ.ಪಿ.1 ಕರಾರು ಪತ್ರವನ್ನು ಮಾಡಲಾಗಿರುತ್ತದೆ ಅಂದರೆ ಸರಿಯಲ್ಲ.

ಪ್ರತಿವಾದಿಯ ಆಸ್ತಿಗಳ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ ಬಲ್ಲರವಾಡ ನವಲಗುಂದ ಮತ್ತು ಧಾರವಾಡದಲ್ಲಿ ಆಸ್ತಿಗಳಿರುತ್ತವೆ. ಅಶೋಕ ಬಾಗೆ ಎನ್ನುವವರು ನನಗೆ ಮಾವನಾಗಬೇಕು. ಅವರು ಗೋಕಾಕ್ ತಾಲ್ಲೂಕಿನವರಾಗಿರುತ್ತಾರೆ. ನವಲಗುಂದದ ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಶೋಕ ಬಾಗೆರವರು ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿದ್ದರು ಅಂದರೆ ಸರಿ. ಸದರಿ ದಾವೆ ಸ್ಪೆಸಿಫಿಕ್ ಪರ್ಫಾರ್ಮೆನ್ಸ್‌ಗಾಗಿ ಹೂಡಿದ್ದರು ಅಂದರೆ ಸರಿ.

ನಾನು ಮತ್ತು ಅಶೋಕ ಬಾಗೆರವರು ಸೇರಿ ಪ್ರತಿವಾದಿಯಿಂದ ಖೊಟ್ಟಿ ಕರಾರು ಪತ್ರ ಮಾಡಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ಪ್ರತಿವಾದಿಯ ಮುಗ್ಧತನವನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ.

ಸಂದೀಪ್ ಬಣವಿ ಎನ್ನುವವರು ನನಗೆ ಪರಿಚಿತರು. ಸದರಿ ಸಂದೀಪರವರು ನನಗೆ ಪರಿಚಿತರಿರುವುದರಿಂದ ಅವರಿಂದಲೂ ಖೊಟ್ಟಿ ಕರಾರು ಪತ್ರವನ್ನು ಸೃಷ್ಠಿಸಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ದಾಖಲು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಕೈಗಾರಿಕಾ ಪ್ರದೇಶದಲ್ಲಿರುವುದರಿಂದ ಎಕರೆಗೆ ಕೋಟಿಗಟ್ಟಲೇ ಬೆಲೆ ಬಾಳುತ್ತದೆ ಅಂದರೆ ಸರಿಯಲ್ಲ. ಹೇಗಾದರೂ ದಾವಾ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂದು ಖೊಟ್ಟಿ ಕರಾರು ಪತ್ರವನ್ನು ತಯಾರಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತಿವಾದಿಗೆ ನಾನು ಯಾವುದೇ ಹಣ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ ಯಾವುದೇ ರೀತಿಯ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮುಂಗಡವಾಗಿ ಬಾಂಡ್ ಪೇಪರ್ ಮತ್ತು 2 ಚೆಕ್ಕುಗಳನ್ನು ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ,

ಧಾರವಾಡ.